**ಸಾಕ್ಷಿಯನ್ನು ದಿಃ07.06.2019 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಆರ್.ವಿ.ಆರ್ ವಕೀಲರಿಂದಃ**

ಈಗ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ ಹಾಗೂ ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿರುತ್ತವೆ ಮತ್ತು ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ.

ವಾದಿಯು ನನಗೆ ದಾವೆಯನ್ನು ನಡೆಸಲು ಜಿಪಿಎ ಅನ್ನು ಕೊಟ್ಟಿದ್ದು ಸದರಿ ಜಿಪಿಎ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು ಗುರ್ತಿಸಲಾಯಿತು.

ಈ ಸಮಯದಲ್ಲಿ ದಿಃ09.10.1970ರ ಅಸಲು ಕ್ರಯಪತ್ರವನ್ನು ಸಾಕ್ಷಿಗೆ ತೋರಿಸಿ ನಿಶಾನೆಯಾಗಿ ಗುರ್ತಿಸಲು ಕೋರಲಾಗಿ ಸದರಿ ಗುರ್ತಿಸುವಿಕೆಗೆ ಪ್ರತಿವಾದಿ ಪರ ವಕೀಲರು ತಕರಾರು ಎತ್ತಿದ್ದು ಸದರಿ ದಾಖಲೆಯನ್ನು ನಾವು ಈಗಾಗಲೇ ಹಾಜರುಪಡಿಸಲು ನ್ಯಾಯಾಲಯದ ಮೂಲಕ ನೋಟೀಸ್ಸು ಕೊಟ್ಟಿದ್ದು ಸದರಿ ನೋಟೀಸ್ಸಿಗೆ ಉತ್ತರವಾಗಿ ಹಾಜರುಪಡಿಸದೇ ಇದ್ದು ಈಗ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರ್ತಿಸಲು ಬರುವುದಿಲ್ಲವೆಂದು ಪ್ರತಿವಾದಿ ಪರ ವಕೀಲರು ತಕರಾರು ಎತ್ತಿರುತ್ತಾರೆ. ಸದರಿ ವಿಷಯದ ಸುನಾವಣೆಗಾಗಿ ಮುಂದಿನ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ.ದಯಾನಂದ ಮೂರ್ತಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**